# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 361/16**

ಚಾ.ಸಾ. 102

ಪ್ರಾ.ಸಾ. 58

ಸಾಕ್ಷಿದಾರರ ಹೆಸರು - ಈಶ್ವರಪ್ಪ

ತಂದೆಯ ಹೆಸರು - ತಿಮ್ಮಪ್ಪ ಬಾವನತ್ತಿ

ವಯಸ್ಸು - 67 ವರ್ಷ

ಉದ್ಯೋಗ - ನಿವೃತ್ತ ಮುಖ್ಯೋಪಾಧ್ಯಾಯರು

ವಾಸ್ತವ್ಯ - ಸಾರವಾಡ ತಾಲೂಕ ಬಬ್ಲೆಶ್ವರ

(ಇಂದು ದಿನಾಂಕಃ 02-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು ಬಂಜಾರ ಪ್ರೌಢ ಶಾಲೆ ವಿಜಯಪುರನಲ್ಲಿ 1985 ರಿಂದ 2019 ರವರೆಗೆ ಸಹ ಶಿಕ್ಷಕ ಮತ್ತು ಮುಖ್ಯೋಪಾಧ್ಯಾಯಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. 2002 ನೇ ಸಾಲಿನಲ್ಲಿ ಆರೋಪಿತರಿಂದ ವಶಪಡಿಸಿಕೊಂಡ ದಾಖಲಾತಿ ಎಂದು ನಗರ ಪೋಲಿಸ ಠಾಣೆಯವರು ನನಗೆ ತೋರಿಸಿ, ನಮ್ಮ ಶಾಲೆಯ ದಾಖಲಾತಿ ಎಂದು ಕೇಳಿದ್ದು ಆದರೆ ಸದರಿ ದಾಖಲಾತಿ ನಮ್ಮ ಶಾಲೆಗೆ ಸಂಬಂಧಿಸಿದ ದಾಖಲಾತಿ ಅಲ್ಲ ಎಂದು ಹೇಳಿಕೆ ನೀಡಿದ್ದೇನೆ . ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-62 ಎಂದು ಗುರುತಿಸಲಾಯಿತು .

**ಪಾಟೀ ಸವಾಲುಃ 1 ರಿಂದ 5 ಮತ್ತು 9 ನೇ** ಆರೋಪಿತರ ಪರ ವಕೀಲರಿಂದಃ

ನಿಪಿ-62 ರಲ್ಲಿ ಯಾವುದೇ ಹೆಸರು ಮತ್ತು ಸಹಿ ಇಲ್ಲ ಎಂದರೆ ಸರಿ . ಅದು ಕೇವಲ ನಮೂನೆ ಮಾತ್ರ ಎಂದರೆ ಸರಿ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ